ಒ ಎಸ್ ನಂ. 24/2016

ಡಿ ಡಬ್ಲ್ಯೂಃ 1

ದಿನಾಂಕಃ 05-02-2026

ಈ ದಿನದಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ವಿ ಎಸ ಡಿ ವಾದಿಯ ಪರ ವಕೀಲರಿಂದ**

ವಿರುಪಾಕ್ಷಪ್ಪ,ಚಂದ್ರಶೇಖರ,ಮಹಾಂತಪ್ಪರವರಿಗೂ ನಾನು ಯಾವುದೇ ರೀತಿಯಿಂದ ಸಂಬಂಧಿಕ ಅಲ್ಲ ಎಂದರೆ ಸರಿಯಲ್ಲ, ವಿರುಪಾಕ್ಷಪ್ಪ ಸಂಬಂಧಿಕ. ವಿರುಪಾಕ್ಷಪ್ಪ ನನ್ನ ಸಂಬಂಧಿಕ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ. ನಾನು ವಿರುಪಾಕ್ಷಪ್ಪನ ಸಂಬಂಧಿಕ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿರುಪಾಕ್ಷಪ್ಪರವರು 2014 ರಲ್ಲಿ ಮೃತಪಟ್ಟಿದ್ದಾರೆ, ದಿನಾಂಕ ನೆನಪಿಲ್ಲ. ಆತನು ನರಗುಂದ ಪಟ್ಟಣದ ದಂಡಾಪೂರ ಓಣಿಯಲ್ಲಿರುವ ತನ್ನ ಮನೆಯಲ್ಲಿ ಮೃತಪಟ್ಟಿದ್ದಾನೆ. ಆತನ ಹೆಂಡತಿ ಅನಸವ್ವ 2016 ರಲ್ಲಿ ಮೃತಪಟ್ಟಿದ್ದಾಳೆ. ಅನಸವ್ವರವರು ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾಳೆ. ಅನಸವ್ವ ಸದರಿ ಆಸ್ಪತ್ರೆಯಲ್ಲಿ ಮೃತಪಟ್ಟಿರುವ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿದ್ದೇನೆ. ವಿರುಪಾಕ್ಷಪ್ಪರವರ ಮಗ ಮಂಜುನಾಥರವರನ್ನು ನಾನು ನೋಡಿದ್ದೇನೆ. ಆತನನ್ನು ನೋಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಹಾಜರು ಪಡಿಸಿದ ಸೃಷ್ಟಿಸಿದ ಭಕ್ಷಿಸ ಪತ್ರವನ್ನು ತಯಾರಿಸುವ ಸಮಯದಲ್ಲಿ ವಿರುಪಾಕ್ಷಪ್ಪನಿಗೆ ಅಂದಾಜು 75-80 ವರ್ಷ ಆಗಿತ್ತು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಅನಸವ್ವರವರಿಗೆ 70-ವರ್ಷ ಆಗಿತ್ತು ಎಂದರೆ ಸರಿಯಲ್ಲ. ಸದರಿ ಭಕ್ಷಿಸ ಪತ್ರ 2014 ರಲ್ಲಿ ನೋಂದಣಿ ಆಗಿದೆ. ದಿನಾಂಕ ನೆನಪಿಲ್ಲ. ಯಾವ ಸಮಯಕ್ಕೆ ನೋಂದಣಿ ಆಗಿದೆ ಎಂಬುದು ನೆನಪಿಲ್ಲ. ಸದರಿ ಭಕ್ಷಿಸ ಪತ್ರ ತಯಾರಿಸಲು ಯಾರು ಮಾಹಿತಿ ನೀಡಿದ್ದಾರೆ ಮತ್ತು ಯಾರು ಸಹಿ ಮಾಡಿದ್ದಾರೆ ಎಂಬುದು ಗೊತ್ತಿಲ್ಲ. ಸದರಿ ದಾಖಲೆಯನ್ನು ತಯಾರಿಸಲು ಎಷ್ಟು ದಿನಗಳು ತಗುಲಿರುತ್ತವೆ ಎಂಬುದು ಗೊತ್ತಿಲ್ಲ. ಸದರಿ ದಾಖಲೆಯನ್ನು ತಯಾರಿಸಿದ ಬರಹಗಾರನ ಹೆಸರು ಗೊತ್ತಿಲ್ಲ.

ಈ ದಾವೆ ಚಾಲ್ತಿ ಇರುವ ಸಮಯದಲ್ಲಿ ದಾವಾ ಆಸ್ತಿಯನ್ನು ದಿ:03-02-2022 ರಂದು 6 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದೇನೆ ಎಂದರೆ ಸರಿ. ದಾವೆ ಮುಗಿಯುವವರೆಗೆ ದಾವಾ ಆಸ್ತಿಯನ್ನು ಹಸ್ತಾಂತರ ಮಾಡುವುದಿಲ್ಲ ಎಂದು ನಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಮೆಮೊ ಸಲ್ಲಿಸಿದ್ದೇನು ಎಂದರೆ ಸರಿಯಲ್ಲ. ದಿ:28-06-2014 ರಂದು ಸದರಿ ಮೆಮೋ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಸದರಿ ಮೆಮೋ ತೋರಿಸಿದ್ದು ಅದನ್ನು ಸಲ್ಲಿಸಿದ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಮೆಮೋದ ಬಗ್ಗೆ ಮಾಹಿತಿ ಇದ್ದರೂ ದಾವಾ ಆಸ್ತಿಯಲ್ಲಿಯ ವಾದಿಯ ಹಿಸ್ಸೆಯನ್ನು ನಷ್ಟ ಮಾಡುವ ಉದ್ದೇಶದಿಂದ 6 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಮೆಮೋದ ಅಂಶಗಳನ್ನು ಉಲ್ಲಂಘಿಸಿ ಆಸ್ತಿ ಮಾರಾಟ ಮಾಡಿರುವುದರಿಂದ ನನ್ನ ವಿರುದ್ಧ ಇದೇ ನ್ಯಾಯಾಲಯದಲ್ಲಿ ಸಿವಿಲ ಮಿಸಲೆನಿಯಸ ನಂಬರ 1/2024 ದಾಖಲು ಆಗಿದೆ ಎಂಬುದು ಗೊತ್ತಿಲ್ಲ. ದಾವಾ ಆಸ್ತಿಯ ಮೇಲೆ ನನಗೆ ಯಾವುದೇ ರೀತಿಯ ಹಕ್ಕು ಅಥವಾ ಹಿತಾಸಕ್ತಿ ಇಲ್ಲದೆ ಇರುವ ವಿಚಾರ ಗೊತ್ತಿದ್ದರೂ ಸುಳ್ಳು ಭಕ್ಷಿಸ ಪತ್ರ ಸೃಷ್ಟಿಸಿ ಹೆಸರು ದಾಖಲಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಸೃಷ್ಟಿಸಿದ ದಾಖಲೆಗಳ ಆಧಾರದ ಮೇಲೆ 6 ನೇ ಪ್ರತಿವಾದಿಗೆ ಆಸ್ತಿ ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ.

ನಾನು ಖಾಯಂ ತರೀಖ ಚಿಕ್ಕಬಾದವಾಡಗಿ ಗ್ರಾಮದಲ್ಲಿ ವಾಸವಾಗಿರುವ ಕಾರಣ ನರಗುಂದದಲ್ಲಿ ಯಾವುದೇ ಸಂಬಂಧಿಕರು ಇಲ್ಲ ಎಂದರೆ ಸರಿಯಲ್ಲ. ನಾನು ಎಂದೂ ದಾವಾ ಆಸ್ತಿಗಳ ಸ್ವಾಧೀನ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ವಿರುಪಾಕ್ಷಪ್ಪ ಮತ್ತು ಅನಸವ್ವರವರಿಗೆ ಮೋಸ ಮಾಡಿ ಭಕ್ಷಿಸ ಪತ್ರ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಜಮೀನಿನ ಕುರಿತು ನನ್ನ ಪರವಾಗಿ ಭಕ್ಷಿಸ ಪತ್ರ ಬರೆದುಕೊಡುವ ಯಾವುದೇ ಅಧಿಕಾರ ವಿರುಪಾಕ್ಷಪ್ಪ ಮತ್ತು ಅನಸವ್ವರವರಿಗೆ ಇರಲಿಲ್ಲ ಎಂದರೆ ಸರಿಯಲ್ಲ. ವಾದಿಯ ನೇರವಾರಸುದಾರರು ಆಗಿರುವ ವಿಚಾರ ಗೊತ್ತಿದ್ದರೂ, ಅವರಿಗೆ ಮೋಸ ಮಾಡುವ ಉದ್ದೇಶದಿಂದ ಆಸ್ತಿಗೆ ಹೆಸರು ದಾಖಲಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದ ಎಲ್ಲ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ವಾದಿಗೂ 1/3 ಹಿಸ್ಸಾ ಇದೆ ಎಂದರೆ ಸರಿಯಲ್ಲ. ನಾನು ಯಾವುದೇ ರೀತಿಯಿಂದ ದಾವಾ ಆಸ್ತಿಗಳಿಗೆ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಯ ದಾವಾ ಆಸ್ತಿಗಳಲ್ಲಿಯ ಹಿಸ್ಸೆಯನ್ನು ನಷ್ಟ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಶ್ರೀ ಎಸ ಎ ಹೆಚ್ 6 ನೇ ಪ್ರತಿವಾದಿಯರ ಪರ ವಕೀಲರಿಂದಃ

ಪ್ರಾಪಂಚಿಕ ಅಡಚಣೆಗಾಗಿ ದಾವಾ ಜಮೀನನ್ನು 2022 ರಲ್ಲಿ ಮಾರಾಟಕ್ಕೆ ತೆಗೆದಿದ್ದೇನು ಎಂದರೆ ಸರಿ. 6 ನೇ ಪ್ರತಿವಾದಿಯೂ ಸದರಿ ಆಸ್ತಿಯನ್ನು ಖರೀದಿಸುವ ಕುರಿತು ನನ್ನ ಜೊತೆ ಮಾತುಕತೆ ಮಾಡಿರುತ್ತಾನೆ ಎಂದರೆ ಸರಿ. ನನ್ನ ಮಾಲೀಕತ್ವದ ದಾಖಲೆಗಳನ್ನು 6 ನೇ ಪ್ರತಿವಾದಿಗೆ ನೀಡಿದ್ದೇನು. ಆ ಸಮಯದಲ್ಲಿ ಜಮೀನಿನ ಪಹಣಿ ಪತ್ರಿಕೆ, ಭಕ್ಷಿಸ ಪತ್ರ ಹಾಗೂ ಹಕ್ಕು ದಾಖಲೆಗಳನ್ನು ನೀಡಿದ್ದೇನು. ವ್ಯವಹಾರಕ್ಕಿಂತ ಮುಂಚೆ ಸದರಿ ಆಸ್ತಿಯನ್ನು 6 ನೇ ಪ್ರತಿವಾದಿಗೆ ತೋರಿಸಿದ್ದೇನು. ದಾವಾ ಜಮೀನಿನ ಮಾಲೀಕತ್ವದ ಕುರಿತು ಸರಿಯಾಗಿ ವಿಚಾರಣೆ ಮಾಡಿದ ನಂತರ 6 ನೇ ಪ್ರತಿವಾದಿಯು ನನ್ನ ಜೊತೆ ಖರೀದಿ ವ್ಯವಹಾರ ಮಾಡಿರುತ್ತಾನೆ ಎಂದರೆ ಸರಿ. ಸದರಿ ಖರೀದಿ ವ್ಯವಹಾರ ರೂ.13 ಲಕ್ಷಗಳಿಗೆ ಆಗಿದೆ ಎಂದರೆ ಸರಿ. ದಿಃ03-02-2022 ರಂದು ಸದರಿ ಖರೀದಿ ಪತ್ರವನ್ನು 6 ನೇ ಪ್ರತಿವಾದಿಗೆ ಬರೆದುಕೊಟ್ಟಿದ್ದೇನೆ ಎಂದರೆ ಸರಿ. ಖರೀದಿ ಪತ್ರದ ಪ್ರಕಾರ 6 ನೇ ಪ್ರತಿವಾದಿಯ ಹೆಸರು ದಾಖಲಿಸುವ ಸಮಯದಲ್ಲಿ ವಾದಿಯು ತಕರಾರು ಸಲ್ಲಿಸಿದ್ದಳು ಎಂದರೆ ಸರಿ. ಆ ಸಮಯದಲ್ಲಿ 6 ನೇ ಪ್ರತಿವಾದಿಗೆ ಈ ದಾವೆಯ ಬಗ್ಗೆ ಮಾಹಿತಿ ಗೊತ್ತಾಗಿರುತ್ತದೆ ಎಂಬುದು ಗೊತ್ತಿಲ್ಲ. ಖರೀದಿ ಪತ್ರದ ಸಮಯದಲ್ಲಿ ಯಾವುದೇ ದಾವೆ ಇಲ್ಲದ ಕಾರಣ ಮಾಹಿತಿ ನೀಡಿರಲಿಲ್ಲ. ವಾದಿ ಸಲ್ಲಿಸಿದ ತಕರಾರಿಗೆ ಏನು ಆದೇಶವಾಗಿದೆ ಎಂಬುದು ಗೊತ್ತಿಲ್ಲ.

ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ತಿಳಿಸಿರುವ ನಾನು ಸಲ್ಲಿಸಿದ್ದ ಅಸಲು ದಾವಾ ನಂ.21/2016 ನನ್ನ ಪರವಾಗಿ ಆದೇಶವಾಗಿದೆ. ಸದರಿ ಆದೇಶದ ವಿರುದ್ಧ ಈ ದಾವೆಯ ವಾದಿ ಮೇಲ್ಮನವಿ ಸಲ್ಲಿಸಿಲ್ಲ. ದಾವಾ ಜಮೀನು ಈಗ 6 ನೇ ಪ್ರತಿವಾದಿಯ ಸ್ವಾಧೀನದಲ್ಲಿದೆ.

**ಮರು ವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರ ದ ನ್ಯಾಯಾಧೀಶರು, ನರಗುಂದ